ಊ) 29 ಖಾಸಗಿ ವ್ಯಕ್ತಿಗಳು : ಸಂಸ್ಥೆಗಳು ಆಸಕ್ತಿ ತೋರಿಸಿವೆ. ನಿಖರವಾದ ಪ್ರಸ್ತಾವನೆ ಯಾರಿಂದಲೂ ಇದುವರೆಗೂ ಬಂದಿಲ್ಲ.

ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಗಾಗಿ ವಿಶ್ವ ಬ್ಯಾಂಕಿನಿಂದ ಪಡೆಯಲಿರುವ ಎರಡನೇ ಹಂತದ ಹಣಕಾಸಿನ ನೆರವಿನಲ್ಲಿ ಕೋಲಾರ ಜಿಲ್ಲೆಗೆ ಸಹಾಯವಾಗುವ ಬಗ್ಗೆ

1083 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕಿನಿಂದ ಪಡೆಯುವ ಎರಡನೇ ಹಂತದ ಹಣಕಾಸಿನ ನೆರವಿಗಾಗಿ ಯೋಜನೆಯೊಂದನ್ನು ಸರ್ಕಾರದವರು ಸಿದ್ದಪಡಿಸಿದ್ದಾರೆಯೇ?

ಆ) ಹಾಗಿದ್ದರೆ ಆ ಯೋಜನೆ ಯಾವುದು?

ಇ) ಆ ಯೋಜನೆಯಲ್ಲಿ ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗೆ ಯಾವ ರೀತಿ ಸಹಾಯಕವಾಗಿದೆ?

ಈ) ಎರಡನೆಯ ಹಂತದ ವಿಶ್ವ ಬ್ಯಾಂಕಿನ ಹಣಕಾಸಿನ ನೆರವಿನಲ್ಲಿ ಕೋಲಾರ ಜಿಲ್ಲೆಗೆ ನೀಡಲಾಗಿರುವ ಹಣಕಾಸಿನ ನೆರವಿನ ಪ್ರಮಾಣವೆಷ್ಟು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಹೌದು.

ಆ) ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ ರೇಷ್ಮೆ ಯೋಜನೆ -2)

1) ಹಿಪ್ಪುನೇರಳೆ ವ್ಯವಸಾಯ ಜಾಸ್ತಿ ಮಾಡುವುದು.

2) ಕಣ್ವ ತಳಿ ಬೆಳೆ ಆಚರಣೆಗೆ ತರುವುದು.

3) ಗೂಡಿನ ಉತ್ಪನ್ನ ಜಾಸ್ತಿ ಮಾಡುವುದು.

4) ಮೈಸೂರು ತಳಿಯ ಹೆಣ್ಣು ಚಿಟ್ಟೆಯನ್ನು ಬೈ ವೋಲ್ಟೈ ತಳಿ ಗಂಡು ಚಿಟ್ಟೆ ಜೊತೆ ಸಂಕರಣ ಮಾಡಿದ ಮೊಟ್ಟೆಗಳನ್ನು ಹಾಗೂ ಉತ್ತಮ ಕಾಲದಲ್ಲಿ ಬೈ ವೋಲ್ಟೈ ತಳಿ ಸಾಕುವ ಪದ್ಧತಿಯನ್ನು ಎಲ್ಲರಲ್ಲೂ ಆಚರಣೆಗೆ ತರುವುದು ಮತ್ತು ಗೂಡಿನ ಗುಣಮಟ್ಟ ವೃದ್ಧಿಪಡಿಸುವುದು.

5) ಗೂಡನ್ನು ಮಳೆ ಮತ್ತು ಬಿಸಿಲಿನಿಂದ ಕಾಪಾಡಿ ವ್ಯವಸ್ಥಿತ ರೀತಿಯಲ್ಲಿ ಮಾರಾಟಕ್ಕೆ ಅನುವು ಮಾಡಲು ಮಾರುಕಟ್ಟೆಗಳ ಕಟ್ಟಡಗಳನ್ನು ಕಟ್ಟುವುದು.

6) ರೇಷ್ಮೆ ಬೆಳೆಯಲ್ಲಿ ಮತ್ತು ನೂಲು ಬಿಚ್ಚಾಣಿಕೆಯಲ್ಲಿ ತಾಂತ್ರಿಕ ಸಲಹೆಗಳನ್ನು ಕೊಡಲು ಮತ್ತು ರೋಗರುಜಿನಗಳನ್ನು ತಡೆಗಟ್ಟಲು ತಾಂತ್ರಿಕ ಸಲಹಾ ಕೇಂದ್ರಗಳನ್ನು ಸ್ಥಾಪಿಸುವುದು. 1341.20 ಲಕ್ಷಗಳು.

ವಿಧಾನ ಸೌಧದ ಮುಂದೆ ಅನಾವರಣಗೊಳಿಸಲಾಗಿರುವ ಪಂಡಿತ್ ಜವಾಹರ್ ಲಾಲ್ ನೆಹರೂರವರ ಪ್ರತಿಮೆ ನಿರ್ಮಾಣ

1084 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನಸೌಧದ ಮುಂದೆ ಅನಾವರಣಗೊಳಿಸಲಾಗಿರುವ ಪಂಡಿತ್ ಜವಾಹರ್ ಲಾಲ್ ನೆಹರೂರವರ ಪ್ರತಿಮೆ ನಿರ್ಮಾಣಕ್ಕಾಗಿ ತಗುಲಿದ ವೆಚ್ಚವೆಷ್ಟು?

ಹಾಗೂ ಈ ಪ್ರತಿಮೆಯನ್ನು ಎಲ್ಲಿ ನಿರ್ಮಿಸಲಾಯಿತು ಮತ್ತು ಇದನ್ನು ನಿರ್ಮಿಸಿದ ಶಿಲ್ಪಿ ಯಾರು?

ಆ) ಸ್ವತಂತ್ರ್ಯ ಭಾರತದ ಪ್ರಥಮ ಪ್ರಧಾನಿಯಾದ ಪಂಡಿತ್ ಜವಾಹರ್ ಲಾಲ್ ನೆಹರೂರವರ ಪ್ರತಿಮೆಯನ್ನು ಅನಾವರಣಗೊಳಿಸಲು ಸ್ವತಂತ್ರ್ಯ ಭಾರತದ ರಾಷ್ಟ್ರಧ್ಯಕ್ಷರನ್ನೋ ಅಥವಾ ದೇಶದ ಪ್ರಧಾನ ಮಂತ್ರಿಗಳನ್ನು ಆಹ್ವಾನಿಸದೇ ರಾಜಕೀಯ ಪಕ್ಷದ ನಾಯಕರೊಬ್ಬರನ್ನು ಆಹ್ವಾನಿಸಿರುವುದರ ಔಚಿತ್ಯವೇನು?

ಇ) ಈ ಅನಾವರಣ ಕಾರ್ಯಕ್ರಮ ಸರ್ಕಾರಿ ಕಾರ್ಯಕ್ರಮವೆ?

ಈ) ಹಾಗಿದ್ದಲ್ಲಿ ಸರ್ಕಾರಕ್ಕೆ ಈ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚವೆಷ್ಟು?

ಉ) ಈ ಅನಾವರಣ ಮಾಡಿದ ಮುಖ್ಯ ಅತಿಥಿಗಳ ಭದ್ರತಾ ವ್ಯವಸ್ಥೆಯೂ ಸೇರಿದಂತೆ ಅವರ ಉಪಯೋಗಕ್ಕಾಗಿ ತಗುಲಿದ ವೆಚ್ಚವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ರೂ. 5,97, 650-00. ಈ ಪ್ರತಿಮೆಯನ್ನು ಶ್ರೀ ಆರ್. ಪಿ.ಕಾಮತ್, ಶಿಲ್ಪಕಾರ ನಂ. 461, ವೀರ ಸಾರ್ವಕರ್ ಮಾರ್ಗ, ಬೊಂಬಾಯಿ ಇವರು ತಯಾರಿಸಿರುತ್ತಾರೆ.

ಆ) ಭಾರತದ ಮೊದಲನೆ ಹಾಗೂ ಸುಪ್ರಸಿದ್ಧ ಪ್ರಧಾನಿಯವರಾಗಿದ್ದ ಭಾರತರತ್ನ ಪಂಡಿತ್ ಜವಾಹರ್ ಲಾಲ್ ನೆಹರುರವರು ವಿಧಾನ ಸೌಧ ಕಟ್ಟಡದ ತಳಹದಿ ಕಲ್ಲನ್ನು 1952ರಲ್ಲಿ ಹಾಕಿದ್ದರು. ಆದ್ದರಿಂದ ದಿವಂಗತರ ಒಬ್ಬರೇ ಮೊಮ್ಮಗನಾಗಿರುವ ಶ್ರೀ ರಾಜೀವ್ ಗಾಂಧಿ ಅವರ ಹಸ್ತದಲ್ಲಿ ಅನಾವರಣವನ್ನು ಮಾಡಿಸುವುದು ಯೋಗ್ಯವೆಂದು ಸರ್ಕಾರವು ನಿರ್ಣಯಿಸಿತು.

ಇ) ಹೌದು.

ಈ) ರೂ.2,91,000-00.

ಉ) 6,761-82.

1990-91ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮಾಸಪತ್ರಿಕೆಗಳು ಹಾಗೂ ವಾರಪತ್ರಿಕೆಗಳಿಗೆ ಸರ್ಕಾರ ನೀಡಿರುವ ಜಾಹೀರಾತುಗಾಗಿ ಹಣದ ಬಗ್ಗೆ

1085 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮಾಸಪತ್ರಿಕೆಗಳು ಹಾಗೂ ವಾರಪತ್ರಿಕೆಗಳಿಗೆ ಸರ್ಕಾರ ಎಷ್ಟು ಮೊತ್ತದ ಜಾಹೀರಾತನ್ನು ನೀಡಿದೆ?

ಆ) ಈ ಪತ್ರಿಕೆಗಳಿಗೆ ಜಾಹೀರಾತು ನೀಡುವಾಗ ಸರ್ಕಾರ ಪಾಲಿಸುವ ನೀತಿ ನಿಯಮಗಳೇನು?

ಇ) ರಾಜ್ಯದಲ್ಲಿನ ಕೆಲವು ಪ್ರಸಿದ್ಧ ವಾರಪತ್ರಿಕೆಗಳಿಗೆ ಜಾಹೀರಾತು ನೀಡುವುದರಲ್ಲಿ ತಾರತಮ್ಯ ತೋರುತ್ತಿರುವುದು ನಿಜವೇ?

ಈ) ಮುಂದಿನ ವರ್ಷಗಳಲ್ಲಿ ಜಾಹೀರಾತು ನೀಡುವಾಗ ಸರ್ಕಾರ ಈ ತಾರತಮ್ಯವನ್ನು ನಿವಾರಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರೂ. 5,44,676-00.

ಆ) ಸರ್ಕಾರಿ ಆಜ್ಞೆ ಎಚ್ ಡಿ 62 ಪಿಐಎ 79 ದಿನಾಂಕ 1-10-1980 ರಲ್ಲಿಯ ನಿಯಯಮಗಳ ಪ್ರಕಾರ ಜಾಹೀರಾತು ನೀಡಲಾಗುತ್ತಿದೆ.